ಕೆಲಸ ಸಲುಪರಹಳ್ಳಿ ಅದರಲ್ಲಿ ೮ ಸಾವಿರ ಮಾತ್ರ ಖರ್ಚು ಮಾಡಿದ್ದಾರೆ. ೮ ಸಾವಿರ ಖರ್ಚು ಮಾಡಿದಾಗ ಆ ಕಾಲಕ್ಕೆ ಕೆಳಗಿರತಕ್ಕ ಜನಗಳಿಗೆ ತೊಂದರೆಯಾಗುತ್ತದೆನ್ನುವ ದೂರುಗಳು ಬಂದವು. ಆಗ ಆಗಿದ್ದು ನಾನು ಹೇಳುತ್ತಿದ್ದೇನೆ. ೧೦ ವರ್ಷಗಳ ಹಿಂದೆ ಆಗಿರತಕ್ಕದ್ದು ಆ ಮಾತು. ಈ ಸರ್ಕಾರದ ಮಾತಲ್ಲ. ಅನಂತರ ಟೆಕ್ನಿಕಲ್ ಫೀಸಬಲಿಟಿ ವಯಬಲ್ ಆಗಿಲ್ಲವೆಂದು ಬರೆಸಿದ್ದಾರೆ. ಯಾವಾಗ ಬರೆಸಿದ್ದಾರೆಂದರೆ ದಿನಾಂಕ ೧೯ನೇ ಜೂನ್ ೧೯೮೫ ರಲ್ಲಿ ಬರೆಸಿದ್ದಾರೆ. ತಾವು ಆ ವರದಿ ಸರಿಯಿಲ್ಲವೆಂದು ಹೇಳುವುದಾದರೆ ಅದು ವಯಬಲ್ ಆಗುತ್ತದೆಂದರೆ ಕೆಳಗೆ ಇರತಕ್ಕ ಜನಗಳಿಗೆ ತೊಂದರೆಯಾಗುವುದಿಲ್ಲ ಅಥವಾ ಯಾರಿಗೆ ಅನುಕೂಲವಾಗಬೇಕೋ ಆ ರೀತಿ ಅನುಕೂಲ ಮಾಡುವುದಕ್ಕೆ ಸಾಧ್ಯವಿದೆ ಇದನ್ನು ಕೈಬಿಡಬಾರದೆಂದು ಹೇಳುವುದಾದರೆ Sir, I will have this matter re-examined. ಅದರ ಇತಿಹಾಸವನ್ನು ನಿಮಗೆ ಹೇಳಿದೆ. ಅದರ ಬಗ್ಗೆ ಪುನಃ ರೀ ಎಕ್ಸಾಮಿನ್ ಮಾಡಿ ವಯಬಲ್ ಆಗಿ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ಮಾಡುತ್ತೇನೆ. ಮಂಗನಹಳ್ಳಿಯದು ೪ ಲಕ್ಷ ರೂಪಾಯಿ ಕೆಲಸ. ನಮ್ಮ ಮಾಹಿತಿ ಪ್ರಕಾರ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರು ಅದಕ್ಕೆ ಆಬ್ಜೆಕ್ಟ್ ಮಾಡುತ್ತಿದ್ದಾರೆಂದು ಇದೆ. ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಆಬ್ಜೆಕ್ಷನ್ ಮಾಡುವುದರಲ್ಲಿ ಅರ್ಥವಿಲ್ಲವೆಂದು ಅದನ್ನೂ ಕೂಡ ಮಾಡಿಸಬೇಕೆಂದರೆ Sir, I will have this also examined as to what is the basis of the objection of the Excise Department. ಅದಕ್ಕೆ ಯಾರು ಅಡ್ಡ ಬರುತ್ತಿದ್ದಾರೆ ಅದನ್ನು ಕೂಡ ನಾನು ನೋಡಿಸಿ ಆಮೇಲೆ ಮಾಡಲಿಕ್ಕೆ ಸಾಧ್ಯವಿದ್ದರೆ ನಾನು ಮಾಡಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಮಂತ್ರಿಗಳು ಹಣ ಒದಗಿಸತಕ್ಕ ಪ್ರಯತ್ನ ಮಾಡಿದರೆ ಕೆಲಸಗಳನ್ನು ಸಂಪೂರ್ಣವಾಗಿ ಮಾಡತಕ್ಕ ಕೆಲಸವನ್ನು ನಾವು ಮಾಡುತ್ತೇವೆ ಅದಕ್ಕೆ ತೊಂದರೆ ಇಲ್ಲ. ಈಗ ತಾವೇನು ಮಾಡುತ್ತೇವೆಂದು ಉತ್ತರ ಹೇಳಿದ್ದೀರಿ ಹಿಂದೆ ಸದ್ಯೋಜಾತಪ್ಪನವರು ಇದ್ದಾಗ ಅವುಗಳಿಗೆ ಶಂಕು ಸ್ಥಾಪನೆ ಮಾಡಿದ್ದರು. ೧೯೮೫ ರಲ್ಲಿ ಆಗ ನಾನು ಶಾಸಕನಾಗಿರಲಿಲ್ಲ. ಆ ಸಂದರ್ಭದಲ್ಲಿ ಇದು ಆಗಿರತಕ್ಕದ್ದು. ನಾನು ಹೇಳತಕ್ಕದ್ದು ಏನೆಂದರೆ ಹರಿಜನ ಗಿರಿಜನರಿಗೆ ಆಗತಕ್ಕ ಸೌಲಭ್ಯಗಳನ್ನು ತಡೆಗಟ್ಟುವುದಕ್ಕೆ ಪಟ್ಟಭದ್ರ ಹಿತಾಸಕ್ತಿಗಳು ಇರುತ್ತವೆ, ಅವರ ಸಹವಾಸದಿಂದ ಈ ಪರಿಣಾಮವಾಗಿದೆ. ಆಗಲೂ ಮಂಜೂರು ಮಾಡಿದ್ದು ಕಾಂಗ್ರೆಸ್ ಸರ್ಕಾರ. ಈಗಲೂ ಕಾಂಗ್ರೆಸ್ ಸರ್ಕಾರ ಮಾಡುವುದಕ್ಕೆ ಸಾಧ್ಯವಿದೆ. ಅವರು ಕೊಟ್ಟಿರತಕ್ಕ ನೆಪಗಳಲ್ಲಿ ಹುರುಳಿಲ್ಲ. ಇದಕ್ಕೆ ಅನುದಾನವನ್ನು ಕೊಡತಕ್ಕ ಆಶ್ವಾಸನೆಯನ್ನು ಕೊಡಿ. ಕೆಲಸವನ್ನು ಸಂಪೂರ್ಣವಾಗಿ ಮಾಡಿ. ಏನೇ ಆಬ್ಜೆಕ್ಷನ್ ಇದ್ದರೂ ಕೂಡ ನಾವು ಅದಕ್ಕೆ ಅನ್ಸರ್ ಮಾಡುತ್ತೇವೆ. ಕೊನೆಯ ಪಕ್ಷ ನಿಮ್ಮನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಎರಡು ಕೆಲಸಗಳಂತೂ ಈ ವರ್ಷ ಪೂರೈಸುತ್ತೇವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಹಣದ ಪ್ರಶ್ನೆಯಲ್ಲ. ಹಣ ಜಾಸ್ತಿ ಬೇಕಾಗಿಲ್ಲ, ಇನ್ನು ಎರಡು ಕೆಲಸಕ್ಕೆ ನಾಲ್ಕೈದು ಲಕ್ಷ ಬೇಕಾಗುತ್ತದೆ. ಒಂದು ವರ್ಷಕ್ಕೆ ಅಷ್ಟು ಹಣ ಬೇಕಾಗುತ್ತದೆ. ಆ ಕಾರಣದಿಂದ ಅಲ್ಲಿ ಕೆಲಸ ನಿಂತಿಲ್ಲ. ಆಬ್ಜೆಕ್ಷನ್ ಏನಿದೆ ಅಂದರೆ ಟೆಕ್ನಿಕಲ್ ಅಥವಾ ಬೇರೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನದ ಒಂದು ಕಡೆ ಆಬ್ಜೆಕ್ಷನ್ ಇದೆ. ಒಂದು ಕಡೆ ಟೆಕ್ನಿಕಲ್ ಅಬ್ಜೆಕ್ಷನ್ ವಯಬಲ್ ಪ್ರಶ್ನೆಯಿದೆ. ಮತ್ತೆ ಕೆಳಗಡೆ ಇರತಕ್ಕವರಿಗೆ ತೊಂದರೆಯಾಗುತ್ತದೆ ಎನ್ನುವ ಮಾತು ಇದೆ. ಅದು ಸರಿಯಲ್ಲವೆಂದು ತಾವು ಹೇಳುವುದಾದರೆ ಅದನ್ನು ಪುನರಪರಿಶೀಲನೆ ಮಾಡಿಸುತ್ತೇನೆ. ಬಜೆಟ್‌ನಲ್ಲಿ ಇದಕ್ಕೆ ನಾಲ್ಕೈದು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಏನೂ ತೊಂದರೆಯಾಗುವುದಿಲ್ಲ.

ತುಮಕೂರಿನಲ್ಲಿ ಬೀಜ ಸಂಸ್ಕರಣಾ ಘಟಕ

೩೦೪ (ಅಃಖಿ) ಶ್ರೀ ಎಸ್. ಷಫಿ ಅಹಮದ್ (ತುಮಕೂರು).—ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತುಮಕೂರಿನಲ್ಲಿ ಬೀಜ ಸಂಸ್ಕರಣಾ ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಆ) ರಾಜ್ಯದಲ್ಲಿ ಎಷ್ಟು ಬೀಜ ಸಂಸ್ಕರಣಾ ಕೇಂದ್ರಗಳಿವೆ ? ಜಿಲ್ಲಾವಾರು ವಿವಿಧ ಬೆಳೆಗಳ ಬೀಜೋತ್ಪಾದನೆ ಕೈಗೊಂಡ ಪ್ರಮಾಣ, ಗುಣಮಟ್ಟ ಹಾಗೂ ಜಿಲ್ಲಾವಾರು ಬಿತ್ತನೆ ಬೀಜಗಳ ವಿತರಣಾ ಪ್ರಮಾಣದ ವಿವರ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು).—

ಅ) ಕರ್ನಾಟಕ ರಾಜ್ಯ ಬೀಜ ನಿಗಮವು ತುಮಕೂರಿನಲ್ಲಿ ಬೀಜ ಸಂಸ್ಕರಣಾ ಕೇಂದ್ರವನ್ನು ಸ್ಥಾಪಿಸುವ ಯೋಜನೆ ಹಾಕಿಕೊಂಡಿದ್ದು ೧೯೯೪ನೇ ಸಾಲಿನಲ್ಲಿ ಸ್ಥಾಪಿಸಲಾಗುವುದು.

ಆ) ಕರ್ನಾಟಕ ರಾಜ್ಯದಲ್ಲಿ ಒಟ್ಟು ೬೫ ಬೀಜ ಸಂಸ್ಕರಣಾ ಕೇಂದ್ರಗಳಿವೆ ಅವುಗಳಲ್ಲಿ ೧೯ ಬೀಜ ಸಂಸ್ಕರಣಾ ಘಟಕಗಳು ರಾಜ್ಯ ಬೀಜ ನಿಗಮಕ್ಕೆ ಸೇರಿರುತ್ತವೆ. ರಾಜ್ಯದಲ್ಲಿ ೧೯೯೩–೯೪ನೇ ಸಾಲಿಗೆ ೪,೩೮,೯೪೦ ಕ್ವಿಂಟಾಲ್ ಪ್ರಮಾಣೀತ ಮೂಲ ಬಿತ್ತನೆ ಬೀಜವನ್ನು ವಿತರಿಸುವ ಗುರಿ ಇದ್ದು ವಿವಿಧ ಮೂಲಗಳಿಂದ ಜನವರಿ ೧೯೯೪ರ ಅಂತ್ಯದವರೆಗೆ ಒಟ್ಟು ೪,೩೨,೨೯೯ ಕ್ವಿಂಟಾಲ್ ಪ್ರಮಾಣೀತ ಹಾಗೂ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ವಿತರಿಸಿ ಒಟ್ಟಾರೆ ಪ್ರಗತಿ ಪ್ರಮಾಣೀತ ಶೇ. ೯೮.೯೪ ರಷ್ಟಾಗಿರುತ್ತದೆ. ೧೯೯೩–೯೪ನೇ ಸಾಲಿನಲ್ಲಿ ನಿಗಮವು ೧,೪೦,೦೦೦ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ಉತ್ಪಾದನೆ ಮಾಡುವ ಗುರಿಯನ್ನು ಹಮ್ಮಿಕೊಂಡಿದೆ. ಹಾಗೂ ೧೯೯೩–೯೪ನೇ ಸಾಲಿನಲ್ಲಿ ನಿಗಮವು ಫೆಬ್ರುವರಿ ೯೪ರ ಅಂತ್ಯಕ್ಕೆ ೮೯,೬೨೨ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರಾಜ್ಯದಲ್ಲಿ ವಿತರಿಸಿದೆ. ಜಿಲ್ಲಾವಾರು ಬಿತ್ತನೆ ಬೀಜ ವಿತರಿಸಿದ ವಿವರಣೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ANNE

District wise Distribution of Various types of

Sl. No.	Crop	BNG (R)	BNG (U)	TMK	KLR	MYS	COORG	MDY	HSN
1	Jowar	9	0	51	—	489	—	1	145
2	Naize	122	13	75	73	514	82	—	477
3	Bajra	—	—	—	—	—	—	—	—
4	Ragi	777	525	840	677	821	—	1292	588
5	Paddy	1566	399	1658	4475	5811	1	4754	2961
6	Wheat	—	—	—	—	—	—	—	—
7	Cowpea	27	4	27	15	158	—	44	30
8	Greengram	52	—	25	4	11	—	10	7
9	Blackgram	—	—	1	1	10	1	9	5

XURE

seeds by K·S.S·C. Ltd· Bangalore (Quintals)

CKM	CTD	SMG	SK	DWR	BLG	NK	BLY	RCR	GLB	BJP	BDR
92	911	399	—	1898	1192	—	560	1723	1756	1787	731
21	658	155	—	665	1195	—	460	174	—	542	—
—	—	—	—	—	29	—	31	479	35	249	—
364	1006	208	—	15	—	—	35	223	—	—	—
813	1492	411	2695	1468	1264	2293	1164	2261	—	—	—
7	10	—	—	963	567	—	40	15	70	184	119
6	353	1	5	144	65	45	90	60	—	6	—
9	7	2	18	120	38	6	7	11	55	33	78
2	—	2	33	6	8	25	1	—	59	—	510

1	2	3	4	5	6	7	8	9	10
10	Bengalgram	4	—	15	3	30	—	—	3
11	Redgram	45	30	87	158	12	—	24	5
12	G. Nut	219	90	778	720	722	—	532	48
13	Safflower	—	—	—	—	—	—	—	—
14	Sunflower	28	4	76	532	281	—	12	110
15	Castor	—	—	—	—	—	—	—	—
16	Soyabean	—	—	—	8	68	—	27	44
17	Sesamum	—	—	—	—	3	—	2	—

11	12	13	14	15	16	17	18	19		221	22
60	—	10	—	1002	208	—	138	280	1066	348	639
4	—	16	—	91	30	—	159	98	728	47	232
63	—	86	3	707	159	4	227	364	132	45	155
24	—	—	—	157	7	—	38	98	637	96	110
69	15	54	—	474	72	—	474	271	951	633	239
—	—	—	—	—	—	—	—	2	—	—	—
9	21	71	2	110	393	—	20	3	21	43	47
—	—	—	2	—	—	1	—	—	8	—	—

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ನನಗೆ ಬಂದಿರುವ ವರದಿ ಪ್ರಕಾರ ಈ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಪ್ರಾರಂಭ ಆಗುವುದಕ್ಕೆ ಏನೇನು ಅನುಕೂಲಗಳು ಬೇಕು ಏನೇನು ಸೌಲಭ್ಯಗಳು ಅದನ್ನೆಲ್ಲಾ ವಿಚಾರಿಸಿ ಆದಷ್ಟು ಬೇಗ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಷಫಿ ಅಹ್ಮದ್.—ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿಳ ಲಕ್ಷದ ೩ಳ ಸಾವಿರದ ೨೯೯ ಕ್ವಿಂಟಾಲ್ ಸೀಡ್ಸ್ ಪ್ರೊಕ್ಯೂರ್ ಮಾಡಿ ಇವತ್ತು ರೈತರಿಗೆ ಒದಗಿಸಿಕೊಡುತ್ತಿದ್ದಾರೆ. ಮೂಲತಃ ನಾನು ಪ್ರಶ್ನೆ ಕಳುಹಿಸಿದ್ದು ನಮ್ಮ ರಾಜ್ಯದಲ್ಲಿ ಸರಿಯಾದ ರೀಸರ್ಚ್ ಇಲ್ಲದಿರುವ ಕಾರಣದಿಂದ ರೈತರಿಗೆ ಸರಿಯಾದ ರೀತಿಯಲ್ಲಿ ಬೀಜಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಮಾನ್ಯ ಸಚಿವರು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಅದರ ಮುಖಾಂತರ ಇಂಪೀರಿಯರ್ ಕ್ವಾಲಿಟಿ ಸೀಡ್ಸ್‌ನ್ನು ರೈತರಿಗೆ ಕೊಡುತ್ತಿದ್ದಾರೆ ಅದು ಇಂಪ್ರೂವ್‌ಮೆಂಟ್ ಆಗಬೇಕು, ಅದನ್ನು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆಯೆಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ನಮ್ಮ ಇಲಾಖೆ ಮತ್ತು ಸಂಬಂಧಪಟ್ಟ ಪರಿನಿತರ ಜೊತೆಯಲ್ಲಿ ಸಮಾಲೋಚನೆ ಮಾಡಿ ಎಷ್ಟು ಬೇಗ ಸೌಕರ್ಯಗಳನ್ನು ಒದಗಿಸುವುದಕ್ಕೆ ಸಾಧ್ಯ, ಇದನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವ ಪರಿಸ್ಥಿತಿಯಿದೆ. ಈ ವರ್ಷ ಮಾಡುತ್ತೇವೆಂದು ಹೇಳಿದ್ದಾರೆ ಅಷ್ಟೆ. ಪೂರ್ಣ ವಿಚಾರ ತಿಳಿದು ನಾನು ಸಭೆಗೆ ಮತ್ತು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ದಿನಾಂಕ ೩೧ನೇ ಮಾರ್ಚ್ ೧೯೬೪ ರ ಲಿಖಿತ ಮೂಲಕ ಉತ್ತರಿಸುವ ೧೭ನೇ ಪಟ್ಟಿಯಲ್ಲಿರುವ ೧೨ ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ ೭೬೨ನ್ನು ಹೊರತುಪಡಿಸಿ ಉಳಿದ ೧೧ ಚುಕ್ಕಿ ಗುರುತಿಲ್ಲದ ಪ್ರಶ್ನೆ ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕೇಂದ್ರ ಸರ್ಕಾರದವರು ಕೋಲಾರ ಜಿಲ್ಲೆಗೆ ೧೯೬೩-೬೪ನೇ ಸಾಲಿನಲ್ಲಿ ಉದ್ಯೋಗ ಭರವಸೆ ಯೋಜನೆಗೆ ಬಿಡುಗಡೆ ಮಾಡಿರುವ ಹಣ

೪೯೯(೮೦೩) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಕೇಂದ್ರ ಸರ್ಕಾರದವರು ಕೋಲಾರ ಜಿಲ್ಲೆಗೆ ೧೯೬೩-೬೪ನೇ ಸಾಲಿಗೆ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಒಟ್ಟು ಹೆಚ್ಚುವರಿ ಬಿಡುಗಡೆ ಮಾಡಿದ ಹಣವೆಷ್ಟು?

(ಆ) ಪ್ರತಿ ತಾಲ್ಲೂಕಿಗೆ ವಿತರಣೆ ಮಾಡಿದ ಒಟ್ಟು ಹಣ?

(ಇ) ಯಾವ ಯಾವ ಬಾಬುಗಳಿಗೆ ಈ ಹಣವನ್ನು ಖರ್ಚು ಮಾಡಬೇಕಾಗಿರುತ್ತೆ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ರೂ ೨೭೦.೦೦ ಲಕ್ಷಗಳು.

(ಆ) ಪ್ರತಿ ತಾಲ್ಲೂಕಿಗೆ ವಿತರಣೆ ಮಾಡಿದ ಹಣದ ವಿವರ ಈ ಕೆಳಕಂಡಂತಿದೆ:—

ಕ್ರಮ ಸಂಖ್ಯೆ	ತಾಲ್ಲೂಕು	ಬಿಡುಗಡೆ ಮಾಡಿದ ಹಣ (ರೂ. ಲಕ್ಷಗಳಲ್ಲಿ) (ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆಯಾದ ರೂ. ೬೭.೫೦ ಲಕ್ಷಗಳು ಸೇರಿ)
೧	ಕೋಲಾರ	೩೭.೫೦
೨	ಮಾಲೂರು	೩೭.೫೦
೩	ಬಂಗಾರಪೇಟೆ	೩೭.೫೦
೪	ಮುಳಬಾಗಿಲು	೩೭.೫೦